has called it even dreams have responsibilities. ಈಗಾಗಲೇ ಮಾನ್ಯ ಉಪಾಧ್ಯಕ್ಷರು ಸದನದಲ್ಲಿ ನಿಯಮ 205ರ ಬಗ್ಗೆ ನಿರ್ಣಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಮತ್ತೆ ಇಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಕಾನ್ಸ್‌ಟ್ಯೂಷನಲ್ ಪ್ರಾಪ್ರೈಟಿ ವಿಚಾರದಲ್ಲಿ ಏನು ನಿರ್ಣಯ ಆಗುತ್ತದೆ ಅದು ಆಗುತ್ತದೆ.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ದಿನವನ್ನು ಗ್ರಾನೈಟ್ ಗೋಷ್ಕರ ತಾವು ಅವಕಾಶ ಮಾಡಿಕೊಡಬೇಕು. ನಾಳೆ ಮಾನ್ಯ ಮುಖ್ಯಮಂತ್ರಿಯವರ ಉತ್ತರವಾಗಲಿ. ಆನಂತರ ನಾಡಿದ್ದು ಗ್ರಾನೈಟ್ ಬಗ್ಗೆ ಸುದೀರ್ಘವಾದ ಚರ್ಚೆಯಾಗಲಿ. ಇದು ಬಹಳ ಪ್ರಮುಖವಾದ ವಿಚಾರ.

ಅಧ್ಯಕ್ಷರು : ನನಗೂ ಸದನ ನಡೆಯುತ್ತಾ ಇದ್ದರೆ ನಾನು ಇಲ್ಲ ಬಂದು ಕುಳಿತುಕೊಳ್ಳಬಹುದು. ಸದನ ಇಲ್ಲದಿದ್ದರೆ ನಾನು ಎಲ್ಲಿ ಹೋಗಿ ಕುಳಿತುಕೊಳ್ಳಲಿ? ನನ್ನನ್ನು ಯಾರು ನೋಡುತ್ತಾರೆ?.. ನನಗೇನೂ ಸದನ ನಡೆಯಲಿ ಎಂದು ಆಸೆನೇ... ನೀವೆಲ್ಲರೂ ಒಪ್ಪಿಕೊಳ್ಳಬೇಕಲ್ಲಾ?

ಶ್ರೀ ಪಾಟಾಳ್ ನಾಗರಾಜ್ : ಈ ವಿಚಾರವು ತಮಗೆ ಬಿಟ್ಟಿದ್ದುದು. ತಾವುಗಳು ಯಾವಾಗ ಬೇಕಾದರೂ ಕರೆಯಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇನ್ನೂ ಒಂದು ದಿನ ಸದನವನ್ನು ಮುಂದೂಡಿದರೆ ತುಂಬಾ ಅನುಕೂಲವಾಗಬಹುದು. ಇಲ್ಲಿ ಅಂದರೆ, ಗ್ರಾನೈಟ್ ಇಡೀ ರಾಜ್ಯದಲ್ಲಿ ಲೂಟಿಯಾಗುತ್ತಾ ಇದೆ.

ಅಧ್ಯಕ್ಷರು : ಆ ವಿಚಾರದಲ್ಲಿ ನಾನು ಆರ್ಬಿಟ್ರರಿಯಾಗಿ ಹೇಳುವುದಕ್ಕೆ ಬರುವುದಿಲ್ಲ. ಸಲಹೆ ಇದೆ. ಸರಕಾರದವರು ನಾಳೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ನಾಳೆ ಗ್ರಾನೈಟ್ ವಿಚಾರವನ್ನು ತೆಗದು ಕೊಳ್ಳೋಣವಲ್ಲವೆ?

ಅಧ್ಯಕ್ಷರು : ಸರಕಾರದ ಪರವಾಗಿ ಅವರು ಹೇಳುತ್ತಾರೆ.

SRI M.C. NANAIAH : We can discuss tomorrow. At what time it should be taken, we can meet in the speaker's chambers and then we will take a decision.

ಗಮನ ಸೆಳೆಯುವ ಸೂಚನೆ

ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನ ಹೊನಲು ಬೆಳಕು ವ್ಯವಸ್ಥೆ

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನಾ ಚರ್ಚಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಕಲ್ಪಿಸಲಾಗಿರುವ ಹೊನಲು

ಬೆಳಕು ಸಂಪರ್ಕ ಕಾರ್ಯನಿರ್ವಹಿಸದಿರುವ ಹಾಗೂ ಇದರ ವಿದ್ಯುತ ಬಿಲ್ಲಿನ ಬಾಕಿ ಪಾವತಿ ಮಾಡದಿರುವ ಬಗ್ಗೆ ಕನ್ನಡ, ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ರಾಜ್ಯಮಂತ್ರಿಗಳು ಗಮನವನ್ನು ಸೆಳೆಯುತ್ತೇನೆ.

ಮಾನ್ಯ ಅಧ್ಯಕ್ಷರೇ, ಸೇಂಟ್ ಫಿಲೋಮಿನಾ ಚರ್ಚಿಗೆ ಕೇಂದ್ರ ಸರಕಾರವು ಪ್ರವಾಸೋದ್ಯೋಮ ಇಲಾಖೆಯ ಮೂಲಕ 20 ಲಕ್ಷ ರೂ. ಹಾಗೂ ರಾಜ್ಯ ಸರಕಾರದ ಪ್ರವಾಸೋದ್ಯಮ ಇಲಾಖೆಯ 5 ಲಕ್ಷ ರೂ.ಗಳನ್ನು ಏರ್ಪು ಮಾಡಿ ಹೊನಲು ಬೆಳಕು ಸಂಪರ್ಕವನ್ನು ಕಾರ್ಯಕ್ರಮ ಮಾಡಿದ್ದರೂ ಸಹ ಅದರ ಬಿಲ್ಲಿನ ಪಾವತಿ ಮಾಡಿಲ್ಲ ಎನ್ನುವ ಹಿನ್ನೆಲೆಯಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಹೊನಲುಬೆಳಕು ವ್ಯವಸ್ಥೆಯನ್ನು ನಿಲ್ಲಿಸಿದ್ದಾರೆ ಎಂಬ ವಿಚಾರದ ಬಗ್ಗೆ ಮಾನ್ಯ ಸಚಿವೆಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಮೈಸೂರಿನ ಸೆಂಟ್ ಫಿಲೋಮಿನಾ ಕ್ಯಾಥ್ಡ್ರಲ್ ಭಾರತದಲ್ಲಿರುವ ಪ್ರಸಿದ್ಧವಾದ ಕ್ರೈಸ್ತ ಚರ್ಚುಗಳಲ್ಲಿ ಒಂದಾಗಿರುತ್ತದೆ. ಈ ಚರ್ಚ್ನ ಭವ್ಯವಾದ ವಾಸ್ತುಶಿಲ್ಪ ಕಲೆಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಸೆಂಟ್ ಫಿಲೋಮಿನಾ ಚರ್ಚ್ಗೆ ದೀಪಾಲಂಕಾರ ಗೊಳಿಸಲು ರೂ. 20.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ. ಈ ದೀಪಾಲಂಕಾರ ಕಾಮಗಾರಿಯನ್ನು ಮೆ: ಮೈಸೂರು ಲ್ಯಾಂಪ್ಸ್ ಲಿಮಿಟೆಡ್, ಬೆಂಗಳೂರು ರವರ ಮತಿಯಿಂದ ಕೈಗೊಂಡು ಪೂರ್ಣಗೊಳಿಸಿ ಚರ್ಚ್ನ ಪ್ರಾಧಿಕಾರಕ್ಕೆ ನಿರ್ವಹಣೆಗಾಗಿ ವಹಿಸಿಕೊಡಲಾಗಿದೆ.

ಪ್ರವಾಸೋದ್ಯಮಿ ಇಲಾಖೆಯು ಸೆಂಟ್ ಫಿಲೋಮಿನಾ ಚರ್ಚಿನ ರಿಪೇರಿ ಕಾಮಗಾರಿ ಗಳಿಗಾಗಿ ರೂ. 2.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರಿಪೇರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಚರ್ಚ್ನ ದೀಪಾಲಂಕಾರಕ್ಕಾಗಿ ಇಲಾಖೆಯು ಚರ್ಚ್ನ ಪ್ರಾಧಿಕಾರದಿಂದ ಆಕ್ಷೇಪಣಾ ರಹಿತ ಪತ್ರವನ್ನು ಪಡೆದುಕೊಂಡಿರುತ್ತದೆ. ಚರ್ಚ್ನ ಪ್ರಾಧಿಕಾರವು ಚರ್ಚ್ಗೆ ಈ ದೀಪಾಲಂಕಾರವನ್ನು ನಿಯಮಿತವಾಗಿ ಹಾಕದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಬಾಕಿ ಇರುವ ವಿದ್ಯುತ್ ಶುಲ್ಕವನ್ನು ಚರ್ಚ್ನ ಪ್ರಾಧಿಕಾರವೇ ಪಾವತಿಸಬೇಕಾಗಿರುತ್ತದೆ.

ಮುಂದುವರಿದ ಯೋಜನೆಯಲ್ಲಿ ಇದರ ನಿರ್ವಹಣೆಯಾಗಿ ಆಯವ್ಯಯ ಒದಗಿಸಿರುವುದಿಲ್ಲ. ಈ ಸ್ಮಾರಕದ ಪ್ರಾಮುಖ್ಯತೆಯನ್ನು ಪ್ರವಾಸಿಗರ ದೃಷ್ಟಿಯಿಂದ ಪರಿಗಣಿಸಿ ಇಲಾಖೆಯು ಚರ್ಚ್ನ ಪ್ರಾಧಿಕಾರದೊಡನೆ ಚರ್ಚಿಸಿ 1997-98ನೇ ಸಾಲಿನ ಆರ್ಥಿಕ ವರ್ಷದಿಂದ ವಾರದ ರಜಾ ದಿನಗಳು ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲಿ ದೀಪಾಲಂಕಾರಗೊಳಿಸುವ ಬಗ್ಗೆ ವಿವರಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಚರ್ಚ್ ಏಷ್ಯಾದಲ್ಲಿ 5ನೇದು ಹಾಗೂ ಕರ್ನಾಟಕದಲ್ಲಿ ಮೊದಲನೆಯದು. ಇದನ್ನು ಆಕರ್ಷಣೀಯವಾಗಿ ಟೂರಿಸಂ ಸ್ಥಳವನ್ನಾಗಿ ಮಾಡಲು

ಕೇಂದ್ರ ಸರಕಾರದವರು 20ಲಕ್ಷ ರೂ.ಗಳನ್ನು ಕೊಟ್ಟಮೇಲೆ ಅದನ್ನು ಯಾರು ಮೇಂಟೇನ ಮಾಡಬೇಕು? ಚರ್ಚನವರಿಗೆ ಎರಡು ಮೀಟರ್‌ಗಳು ಇವೆ. ಒಳಗೆ ಇರುವ ಮೀಟರ್‌ನ ಹಣವನ್ನು ಅವರು ಉಪಯೋಗಿಸಿಕೊಂಡು ಹೋಗಿ ಅವರೇ ಬಿಲ್ ಇತ್ಯಾದಿಗಳನ್ನು ನೋಡಿಕೊಳ್ಳುತ್ತಾರೆ. ಆದರೆ ಹೊರಗೆ ಇಲ್ಯುಮಿನೇಷನ್ ಮಾಡಿರುವುದನ್ನು ಅದರ ಖರ್ಚಿನ್ನು ಸರಕಾರದವರು ಕೊಡುವುದು ಬೇಡವೇ? ಈಗ ದಸರಾ ಸಂದರ್ಭದಲ್ಲಿ ಪ್ಯಾಲೇಸನ್ ಖರ್ಚಿನ್ನು ಯಾರು ಕೊಡುತ್ತಾರೆ?

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ. ಮಾಮನಿ)ರವರು ಪೀಠವನ್ನು ಅಲಂಕರಿಸಿದರು.)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಆ ಸ್ಥಳಕ್ಕೆ ಸಂದರ್ಶನಕ್ಕೆ ಬರುವವರಿಗೆ ಕೆಲವು ಚಾರ್ಜ್‌ಗಳನ್ನು ಇಟ್ಟಿದ್ದಾರೆ; ದಸರಾ ಸಂದರ್ಭದ ವಿಷಯಕ್ಕೆ. ಆದರೆ ಈ ಚರ್ಚ್‌ಗೆ ಬರುವವರಿಗೆ ಯಾವ ತರಹದ ಶುಲ್ಕವನ್ನೂ ಹಾಕಿಲ್ಲ. ತಮಗೆಲ್ಲರಿಗೂ ಗೊತ್ತಿದೆ ಇದು. ಸುಮಾರು 93-95 ಸಾವಿರ ರೂಪಾಯಿ ಎಲೆಕ್ಟ್ರಿಸಿಟಿ ಬಿಲ್ ಆಗಿದೆ. ಚರ್ಚ್‌ನವರು ಅಲಂಕಾರ ಮಾಡುವಾಗ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿದರು. ಇವತ್ತು ಆ ಬಿಲ್ಲನ್ನು ನಾವು ಕಟ್ಟುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಈ ವರ್ಷದ ಆಯವ್ಯಯದಲ್ಲಿ ಇದಕ್ಕೆ ಯಾವ ತರಹದ ಬಾಬ್ತಿನಲ್ಲಿ ಹಣ ಇಲ್ಲ. ಮುಂದಿನ ವರ್ಷದ ಆಯವ್ಯಯ ಪಟ್ಟಿಯಲ್ಲಿ ಸೇರಿಸಲು ಚರ್ಚ್‌ನ ಮುಖ್ಯಸ್ಥರನ್ನು ಕರೆಯಿಸಿ ಸಮಾಲೋಚನೆ ಮಾಡಿ ವ್ಯವಸ್ಥೆ ಮಾಡುತ್ತೇನೆ ಎಂದು ಈ ಸಭೆಗೆ ಹೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಬಾಕಿ ಏನಿದೆ ಅದನ್ನು ನೀವು ಕಟ್ಟಬೇಕಲ್ಲಾ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ನಾನು ಹೇಳತಕ್ಕದ್ದು ತಾಜಮಹಲ್ ಇದೆ. ಅದು ರಾಷ್ಟ್ರದ ಆಸ್ತಿ. ಮೈಸೂರು ಅರಮನೆ ಇದೆ. ಅದು ರಾಷ್ಟ್ರದ ಆಸ್ತಿ. ಹಾಗೆಯೇ ದೇಶದಲ್ಲಿ ಮೂರನೆಯದು ಇದು. ಆರ್ಕಿಯಾಲಜಿ ದೃಷ್ಟಿಯಿಂದ ಪ್ರಸಿದ್ಧವಾದುದು. ಅಪರೂಪದ್ದು ಅದು. ಹೊರಗಡೆ ಇಲ್ಯುಮಿನೇಷನ್ ಹಾಕುವುದು ಪ್ರವಾಸಿಗರಿಗೆ. ಪ್ರವಾಸಿಗರಿಗೋಸ್ಕರ ಖರ್ಚು ಮಾಡಿದರೆ ಚರ್ಚಿಗೆ ಸಂಬಂಧಪಡುತ್ತದೆಯೇ ಅದು? ಮೈಸೂರಿಗೆ ಬಂದರೆ, ಹೋಟೆಲ್‌ನಲ್ಲಿ ಇಳಿದುಕೊಂಡರೆ, ವ್ಯಾಪಾರ ಆದರೆ, ಫಾರಿನರ್ಸ್ ಟೂರ್ ಬಂದರೆ..... ಒಳಗಡೆದು ಅವರು ಮಾಡಿಕೊಳ್ಳಲಿ. ದಯವಿಟ್ಟು ಏನಾದರೂ ಮಾಡಿ ಖಾಯಂ ಆಗಿ ವ್ಯವಸ್ಥೆ ಮಾಡಿ ಹೊರಗಡೆ ಲೈಟ್ ಹಾಕುವುದಾದರೆ. ಇಲ್ಲದಿದ್ದರೆ ಕಿತ್ತುಹಾಕಿ. ಇನ್ನೇನು ಮಾಡುವುದಕ್ಕಾಗುತ್ತದೆ? ಪ್ರವಾಸಿಗರಿಗೋಸ್ಕರ ಹಾಕತಕ್ಕಂಥಾದ್ದು. ಚರ್ಚ್ ಪ್ರಾಧಿಕಾರದವರಿಗೋಸ್ಕರ ಅಲ್ಲ. ಆದರಿಂದ ಅವರಿಗೇನೂ ಆದಾಯ ಹೆಚ್ಚಾಗಿಲ್ಲ. ಟಿಕೆಟ್ ಹಾಕಿಲ್ಲ ಅವರು ಒಳಗೆ ಹೋಗಿಬರುವುದಕ್ಕೆ. ಆದ್ದರಿಂದ ಸರ್ಕಾರವೇ ಇದಕ್ಕೆ ವ್ಯವಸ್ಥೆ ಮಾಡಿ. ವಿಧಾನಸೌಧಕ್ಕೆ ಸುತ್ತ ಲೈಟ್ ಹಾಕಿಲ್ಲವೆ? ಇವನ್ನೆಲ್ಲಾ ನಾವು ಸ್ವಲ್ಪ ರಾಜ್ಯದ ಸಂಪತ್ತು ಎಂದು ತಿಳಿದುಕೊಂಡು, ಯಾವುದೇ ಧರ್ಮಕ್ಕೆ ಸೇರಿರಲಿ ಅದು, ಅದನ್ನು ನಾವು ಪ್ರೋತ್ಸಾಹಿಸಿಕೊಂಡು ಬರಬೇಕಾದ್ದು ಬಹಳ ಪ್ರಾಮುಖ್ಯ. ದಯವಿಟ್ಟು ಅದಕ್ಕೆ ಖಾಯಂ ವ್ಯವಸ್ಥೆ ಮಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಹಿರಿಯ ಸದಸ್ಯರಾದಂಥ ನಂಜೇಗೌಡರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಆಯವ್ಯಯ ಪಟ್ಟಿಯಲ್ಲಿ ವ್ಯವಸ್ಥಿತವಾದಂಥ, ನಿರ್ದಿಷ್ಟವಾದಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗ ಹಾಲಿ ಪರಿಸ್ಥಿತಿಗೆ ಏನು ಮಾಡುತ್ತೀರಿ ನೀವು? ಡೆವಲಪ್‌ಮೆಂಟ್ ಎಂದು ಹೇಳಿ ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿ ಅಮಿತಾಬ್ ಬಚ್ಚನ್‌ಗೆ ಕೊಡುತ್ತೀರಿ. ಇಲ್ಲಿ ನಡೆಯತಕ್ಕ, ನಮ್ಮಲ್ಲಿರತಕ್ಕ ಕರ್ನಾಟಕದ ಟೂರಿಸಂಗೆ ಕೊಡುವುದಕ್ಕೆ ಹಣ ಇಲ್ಲ ಅಂದರೆ ಅದಕ್ಕೆ ಹೇಗೆ ಹಣ ಇತ್ತು? ಅದಕ್ಕೆ ಹೇಗೆ ಬಂತು ಹಣ, ಇದಕ್ಕೆ ಏತಕ್ಕೆ ಇಲ್ಲ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಚರ್ಚ್‌ನ ಮುಖಂಡರನ್ನು ಕರೆಯಿಸಿ ಅದನ್ನು ತೀರ್ಮಾನ ಮಾಡುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಸನ್ಮಾನ್ಯ ಅಧ್ಯಕ್ಷರೆ, 20 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು...

ಉಪಾಧ್ಯಕ್ಷರು : ಮಾರುತಿ ರಾವ್ ಅವರು ಸೂಚನೆ ತಂದಿದ್ದಾರೆ. ತಾವು ಏತಕ್ಕೆ ಮಾತನಾಡುತ್ತೀರಿ ಬಸವರಾಜ್ ಅವರೆ? ನೀವು ಮಾತನಾಡಬಾರದು. ಅವರು ಸೂಚನೆ ತಂದಿದ್ದಾರೆ.

ಶ್ರೀ ಇ. ಮಾರುತಿ ರಾವ್ ಪವಾರ್ : ಸನ್ಮಾನ್ಯ ಸಭಾಧ್ಯಕ್ಷರೆ, ಸಚಿವರು ಆಯವ್ಯಯದಲ್ಲಿ ಅಳವಡಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈಗ 93 ಸಾವಿರ ರೂಪಾಯಿ ಲೈಟ್ ಬಿಲ್ ಕಟ್ಟಬೇಕಾದ್ದು ಬಾಕಿ ಇದೆ. ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು ಒಂದು ಟೆಲಿಗ್ರಾಂ ಕಳುಹಿಸಿದರು ಮೈಸೂರಿನಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಕಛೇರಿಗೆ. ಕೆ.ಇ.ಬಿ.ಗೆ ಕಳುಹಿಸಿದರು. ಕ್ರೈಸ್ತರಿಗೆ ಬರುವುದು ಕ್ರಿಸ್‌ಮಸ್ ಒಂದೇ ಒಂದು ಹಬ್ಬ. ಕ್ರಿಸ್‌ಮಸ್ ಹಬ್ಬಕ್ಕಾಗಲೀ ನ್ಯೂ ಇಯರ್ ಡೇಗಾಗಲೀ ಕರೆಂಟ್ ಕೊಡಿ ಅಂದರೆ, ಎಷ್ಟು ಕಾಡಿಬೇಡಿದರೂ ಸಹ ಕೊಡುತ್ತಿಲ್ಲ. ಸರ್ಕಾರ ಹೇಳುತ್ತದೆ ನಾವು ಅಲ್ಪಸಂಖ್ಯಾತರಿಗೆ ಹಾಗೆ ಮಾಡಿದೆವು ಹೀಗೆ ಮಾಡಿದೆವು ಎಂದು. ಏನು ಮಾಡಿದೆ? ನಿಖರವಾದಂಥ ಉತ್ತರವನ್ನು ತಾವು ಕೊಡಲಿಲ್ಲ ಅಂದರೆ ಹೇಗೆ? ಮುಂದಿನ ಆಯವ್ಯಯದಲ್ಲಿ ತರುತ್ತೇವೆಂದರೆ ಹೇಗೆ?

ಉಪಾಧ್ಯಕ್ಷರು : ಆಯಿತು. ತಾವು ದಯಮಾಡಿ ಕೂಡ್ರಿ.

ಶ್ರೀ ಇ. ಮಾರುತಿ ರಾವ್ ಪವಾರ್ : ಸಂಬಂಧ ಮಾಡುವುದಕ್ಕಾಗುತ್ತದೆ..

ಉಪಾಧ್ಯಕ್ಷರು : ಉತ್ತರ ಕೊಡುತ್ತಾರೆ, ಕುಳಿತುಕೊಳ್ಳಿ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಚರ್ಚ್ ಇರಬಹುದು. ಮಸೀದಿ ಇರಬಹುದು. ದೇವಸ್ಥಾನ ಇರಬಹುದು. ಪ್ರವಾಸಿಗರು ಎಲ್ಲಿ ಬರುತ್ತಾರೆ ಅವರ ಅನುಕೂಲಕ್ಕಾಗಿ ನಮ್ಮ ಇಲಾಖೆಯಿಂದ ಏನು ಮಾಡಬೇಕಾಗುತ್ತದೋ ಅದನ್ನು ಮಾಡಲೇಬೇಕಾಗುತ್ತದೆ. ಅದು ನಮ್ಮ ಸರ್ಕಾರದ ಕರ್ತವ್ಯ. ಈಗಿರತಕ್ಕ ಹಾಲಿ ಬೆಲೆ ಬಗ್ಗೆ ಇಷ್ಟರಲ್ಲೇ ಅವರನ್ನು ಕರೆಸಿ ನಾನು ತೀರ್ಮಾನ ಮಾಡುತ್ತೇನೆ.

ಶ್ರೀ ಇ. ಮಾರುತಿ ರಾವ್ ಪವಾರ್ : ಈಗ ಕೊಡುತ್ತೀರೋ ಇಲ್ಲವೋ ಹೇಳಬೇಕು.

ಶ್ರೀ ಎ. ರಾಮದಾಸ : 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಲ್ಬ್‌ಗಳನ್ನು ಹಾಕಿ ಲೈಟ್ ಉರಿಯದೇ ಹೋದರೆ ಪ್ರಯೋಜನ ಏನು?

(ಗೊಂದಲ)

ಶ್ರೀ ಎಂ. ರಾಮದಾಸ್ : 20 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಲ್ಲಾ ಮುಂದಿನ ಕಾರ್ಯಕ್ರಮ ಏನು? ಹಾಲಿ ಕೊಡಬೇಕಾಗಿರುವುದಕ್ಕೆ ಕ್ರಮ ಏನು ತೆಗೆದುಕೊಳ್ಳುತ್ತೀರಿ? ಏನು ಮಾಡುತ್ತೀರಿ ಹೇಳಿ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನೀವೇ ಆ ದೀಪಲಂಕಾರ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರಗಳು ನಿರ್ಧಾರಗಳನ್ನು ಸದನದಲ್ಲೇ ತಕ್ಷಣದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವೆ? ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಅವರ ಜೊತೆ ಮಾತನಾಡುತ್ತೇನೆ ಎಂದು ಹೇಳಿ. ತತ್‌ಕ್ಷಣದಲ್ಲೇ ಈ ನಿಮಿಷದಲ್ಲೇ ಸದನದಲ್ಲಿ ಉತ್ತರ ಕೊಡಬೇಕು ಅಂದರೆ ನಾವು ಸರ್ಕಾರ ನಡೆಸಲಿಕ್ಕಾಗುತ್ತದೆಯೇ? ತಾವು ಹಿರಿಯ ಸದಸ್ಯರಿದ್ದೀರಿ ಪ್ರಮೀಳಾರವರೇ ಹೇಗೆ ತತ್‌ಕ್ಷಣದಲ್ಲಿ ಉತ್ತರ ಕೊಡುವುದಕ್ಕಾಗುತ್ತದೆ? ಕರೆಯಿಸಿ ಮಾತನಾಡುತ್ತೇವೆ ಎಂದು ಹೇಳಿದ್ದಾರೆ. ಕರೆಯಿಸಿ ಮಾತನಾಡುತ್ತಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ : ದೀಪಾಲಂಕಾರ ನಡೆಯಬೇಕೋ ಬೇಡವೋ? ಟೂರಿಸ್ಟ್ ಬರಬೇಕೋ ಬೇಡವೋ? ಅದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್ : ನಾನು ಇದರ ಬಗ್ಗೆ ಎಗ್ಸಾಮಿನ್ ಮಾಡುತ್ತೇನೆ, ಅವರನ್ನು ಕರೆಯಿಸಿ ಚರ್ಚೆ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಮಾತನಾಡುತ್ತಾರೆ. ಈ ನಿಮಿಷದಲ್ಲೇ ಹೇಳಿ ಅಂದರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈ ಚರ್ಚೆಗೆ ಪ್ರವಾಸಿಗರು ದೀಪಾಲಂಕಾರ ಇಲ್ಲದಿದ್ದಾಗಲೂ ಬರುತ್ತಿದ್ದರು. ಪುರಾತನವಾದಂಥ ಚರ್ಚ್. ಇವತ್ತೂ ಬರುತ್ತಿದ್ದಾರೆ. ಇವತ್ತಿನ ದಿವಸ ಅದರ ಬಗ್ಗೆ ನಿರ್ವಿವಾದ. ಈಗಿರತಕ್ಕ 93ರಿಂದ 95 ಸಾವಿರ ರೂಪಾಯಿ ಎಲೆಕ್ಟ್ರಿಕ್ ಬಿಲ್ಲನ್ನು ಅವರನ್ನು ಕರೆಸಿ ಸಮಾಲೋಚನೆ ಮಾಡಿ ಅದಕ್ಕೆ ತೀರ್ಮಾನ ಮಾಡಿ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದ್ದೇನೆ. ಇನ್ನೆಂಥ ಉತ್ತರ ಹೇಳಬೇಕು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಹೊನಲು ಬೆಳಕು ತೀರ್ಮಾನ ಮಾಡಿದ್ದುದು ಸರ್ಕಾರ.

ಉಪಾಧ್ಯಕ್ಷರು : ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಈಗ ತಾವು ಕೂಡಿ . ಈಗ ಶಾಸನರಚನೆ. ವಿಧೇಯಕವನ್ನು ಮಂಡಿಸುವುದು. ಕರ್ನಾಟಕ ಧನವಿನಿಯೋಗ ವಿಧೇಯಕ 1997.

ಶ್ರೀ ಸಿ.ಹೆಚ್. ವಿಜಯಶಂಕರ : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಸಮರ್ಪಕವಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು : 1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು. ತಾವು ಪ್ರಸ್ತಾಪ ಮಾಡಿ.

(ಗೊಂದಲ)

ಉಪಾಧ್ಯಕ್ಷರು : ಅದೆಲ್ಲಾ ಸಾಧ್ಯವಿಲ್ಲ. ಅದೆಲ್ಲಾ ಮಾಡಬಾರದು. ಆ ತರಹ ಮಾಡಿದರೆ ಹೇಗೆ? ತಾವು ದಯಮಾಡಿ ಕೂಡಿ ನಾನು ಹೇಳುತ್ತೇನೆ. ಈ ತರಹ ಎಂಟು ಹತ್ತು ಜನ ಎದ್ದು ನಿಂತು ಮಾತನಾಡಿದರೆ ಯಾರು ಉತ್ತರ ಕೊಡುತ್ತಾರೆ? ಸಭೆಯ ಶಿಸ್ತು ನಿಯಮಾವಳಿಗಳನ್ನು ಕಲಿತುಕೊಂಡು ತಾವು ಒಳಗಡೆ ಬರಬೇಕು. ತಾವೆಲ್ಲಾ ಈ ರೀತಿ ಮಾಡಿದರೆ ಹೇಗೆ? ಮಂತ್ರಿಗಳು ಉತ್ತರ ಹೇಳಿದ್ದಾರೆ. ಆದರೆ ಪದೇ ಪದೇ 8-10 ಜನ ಎದ್ದುನಿಲ್ಲುತ್ತೀರಿ. ದಯಮಾಡಿ ಕೂಡ್ರಿ. ಈ ರೀತಿ ಮಾಡುವುದಕ್ಕಾಗುವುದಿಲ್ಲ.

ವಿತ್ತೀಯ ಕಾರ್ಯಕಲಾಪ

1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, "1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ".

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"1997ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನವಿನಿಯೋಗ * ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

---

* ಅನುಬಂಧ - I